| ದಾಖಲಾತಿ ಸಂಖ್ಯೆ (ಕಾರ್ಯಲಯದ ಬಳಕೆ) | **ಅರ್ಜಿಪತ್ರ**     **ಪ್ರವೇಶ ಪತ್ರ** | ಭಾವಚಿತ್ರ |
|---|---|---|
| ಆಯ್ಕೆ (ಕಾರ್ಯಲಯದ ಬಳಕೆ) | | |

# ಶುಭಂ ಕರೋತಿ ಮೈತ್ರೇಯೀ ಗುರುಕುಲ

Recognised by Karnataka Samskrit University - Bengaluru

(Affiliated to NIOS - MHRD Govt of INDIA)

An Integral Study Center for Girls

#. 52/1, ದೊಡ್ಡ ಆಲದ ಮರದ ರಸ್ತೆ, ರಾಮೋಹಳ್ಳಿ, ಕೆಂಗೇರಿ ಹೋಬಳಿ, ಬೆಂಗಳೂರು – 560 074
ಸಂಚಾರ ದೂರವಾಣಿ : 8660739487 or 8050681425
e-mail : shubhamkarotimaitreyigurukula@gmail.com
web : www.shubhamkarotigurukula.com

| ಮಗುವಿನ ಹೆಸರು : | | | ಅರ್ಜಿ ದಿನಾಂಕ | |
|---|---|---|---|---|
| ವಿಳಾಸ: | ಜನ್ಮ ದಿನಾಂಕ | | ಎತ್ತರ | |
| | ವಯಸ್ಸು | | ತೂಕ | |
| | ಮಾತೃ ಭಾಷೆ | | ರಕ್ತದ ಗುಂಪು | |
| | ಧರ್ಮ | | ಜಾತಿ | |

| | |
|---|---|
| ಮಗುವಿನ ಮುಖದ ಆಕಾರ – ಗುರುತುಗಳು | |
| ತಂದೆಯ ಹೆಸರು : | ಶಿಕ್ಷಣ : |
| ತಾಯಿಯ ಹೆಸರು : | ಶಿಕ್ಷಣ : |
| ದೂರವಾಣಿ ತಂದೆ : | ತಾಯಿ : |
| ತಂದೆ ವೃತ್ತಿ : | ತಿಂಗಳ ಆದಾಯ : |
| ತಾಯಿ ವೃತ್ತಿ : | ತಿಂಗಳ ಆದಾಯ : |

| | | | |
|---|---|---|---|
| ಆಧಾರ್ ಕಾರ್ಡ್ ನಂ. | ತಂದೆ | ತಾಯಿ | ಮಗಳು |
| ಪ್ಯಾನ್ ನಂ. | ತಂದೆ | ತಾಯಿ | ಇತರೇ |

| ಸಂಖ್ಯೆ | ಕುಟುಂಬ ಸದಸ್ಯರ ಹೆಸರು | ವಯಸ್ಸು | ಸಂಬಂಧ | ವೃತ್ತಿ | ಸಹಿ |
|---|---|---|---|---|---|
| 1) | | | | | |
| 2) | | | | | |
| 3) | | | | | |
| 4) | | | | | |
| 5) | | | | | |

(ಮೇಲಿನ ಎಲ್ಲಾ ಅಂಶಗಳನ್ನೂ ಕಡ್ಡಾಯವಾಗಿ ತುಂಬಬೇಕು)

| | |
|---|---|
| ಮಗು ಮುಗಿಸಿರುವ ತರಗತಿ : | SATS NO. : |
| PEN NO. : | |
| ಮಗು ಓದುತ್ತಿರುವ ಶಾಲೆಯ ಹೆಸರು ಮತ್ತು DIAS NO. : | |
| ಮಗು ಶಿಕ್ಷಣ ಪಡೆದಿರುವ ಕಲಿಕಾ ಮಾಧ್ಯಮ : | |
| ಹಾಲಿ ಪರೀಕ್ಷೆ ಮುಗಿಸಿದ ತರಗತಿ : | |
| ಮಗುವಿಗೆ ಆಸಕ್ತಿಯ ವಿಷಯಗಳು : | |
| ಮಗುವಿನಲ್ಲಿ ಗುರುತಿಸಿರುವ ಪ್ರತಿಭೆ : | |
| ಇತರೇ ಪಠ್ಯೇತರ ಕಲಿಕೆ ಹೊಂದಿರುವ ಬಗ್ಗೆ : | |
| ಮಗುವಿನ ಬಗ್ಗೆ ಆರೋಗ್ಯದಲ್ಲಿ ಗಮನಿಸ ಬೇಕಾದ ಮಾಹಿತಿ : | |
| ಗುರುಕುಲವನ್ನು ಪರಿಚಯಿಸಿದವರ ಬಗ್ಗೆ : | |
| ಬೆಂಗಳೂರಿನಲ್ಲಿ ಇರುವ / ನಿಮ್ಮ ಹತ್ತಿರದ ಯಾವುದೇ ಒಬ್ಬರ ಸಂಬಂಧಿಕರ ವಿವರ : | |
| ಸಂಬಂಧಿಗಳ ವಿಳಾಸ : | ಸಂಬಂಧಿಗಳ ದೂರವಾಣಿ : |

ಮನೆಯಲ್ಲಿರುವ ಕುಟುಂಬದ ಭಾವಚಿತ್ರ

# ಪಾಲಕರ ಸಮ್ಮತಿ ಪತ್ರ

ಪಾಲಕರಾದ ನಾವು, ನಮ್ಮ ಸ್ವ ಇಚ್ಛೆಯಿಂದ ಹಾಗೂ ನಮ್ಮ ಸಂಪೂರ್ಣ ಜವಾಬ್ದಾರಿಯ ಮೇಲೆ ನಮ್ಮ ಮಗಳಾದ ಕುಮಾರಿ.......................................................................................ಳನ್ನು ನಿಮ್ಮ ಗುರುಕುಲದಲ್ಲಿ ಸರ್ವಾಂಗೀಣ ಹಾಗೂ ಸಂಸ್ಕಾರಪೂರಿತ ಶಿಕ್ಷಣ ಪಡೆಯಲೆಂಬ ಉದ್ದೇಶದಿಂದ 7 ವರ್ಷಗಳಕಾಲ ವ್ಯಾಸಂಗ ಮಾಡಲು ಗುರುಕುಲಕ್ಕೆ ಸೇರಿಸುವ ಸಂಕಲ್ಪವನ್ನು ಮಾಡಿರುತ್ತೇವೆ. ನಮ್ಮ ಮಗಳು ಆರೋಗ್ಯವಾಗಿರುತ್ತಾಳೆ ಹಾಗೂ ಗುರುಕುಲದ ಶಿಕ್ಷಣ ಪಡೆಯುವಲ್ಲಿ ತೀವ್ರ ಆಸಕ್ತಿಹೊಂದಿರುತ್ತಾಳೆ.

ಈ ಹಿನ್ನಲೆಯಲ್ಲಿ ನಿಮ್ಮ ಗುರುಕುಲದ ಪರಿಚಾಯಿಕೆಗೆ ಅಗತ್ಯವಾದ ಮಾಹಿತಿಯ ವಿಷಯಗಳನ್ನು ತಿಳಿದು ಅರ್ಥೈಸಿ ಕೊಂಡಿರುವೆವು. ಅದರಲ್ಲೂ ವಿಶೇಷವಾಗಿ, ಗುರುಕುಲದ ಹೊಣೆಗಾರಿಕೆ, ಪಾಲಕರು ಪಾಲಿಸಬೇಕಾದ ನಿಯಮಗಳು ಮತ್ತು ಹೊಣೆಗಾರಿಕೆ ಇವುಗಳ ಬಗ್ಗೆ ಕೂಲಂಕಷವಾಗಿ ಅರ್ಥೈಸಿಕೊಂಡಿರುತ್ತೇವೆ. ಈ ಹಿನ್ನಲೆಯಲ್ಲಿ ನಿಮ್ಮ ಸಂಸ್ಥೆಗೆ ಹಾಗೂ ಅದರ ಸದಸ್ಯರಿಗಾಗಲಿ ನಮ್ಮಿಂದ ಅಥವಾ ನಮ್ಮ ಕಡೆಯವರಿಂದ ಯಾವುದೇ ರೀತಿಯಲ್ಲಿ ತೊಂದರೆ ಆಗದಂತೆ ಸಂಪೂರ್ಣ ಸಹಕಾರ ನೀಡಲು ಬದ್ಧರಾಗಿರುವುದರ ಬಗ್ಗೆ ಈ ಕೆಳಗೆ ನಮ್ಮ ಮನೋಭಾವನೆಯನ್ನು ವ್ಯಕ್ತಪಡಿಸುತ್ತೇವೆ.

ನಾವಾಗಲಿ ಅಥವಾ ನಮ್ಮ ಮಗುವೇ ಆಗಲಿ ಸಂಸ್ಥೆಯ ನಿಬಂಧನೆಗಳನ್ನು ಅಥವಾ ರೀತಿ, ನೀತಿ, ನಿಯಮಗಳನ್ನು ಉಲ್ಲಂಘಿಸಿದಲ್ಲಿ ಮತ್ತು ನಮ್ಮ ಅಥವಾ ನಮ್ಮ ಮಗುವಿನ ವರ್ತನೆ ಗುರುಕುಲದ ಹಿತದೃಷ್ಟಿಗೆ ಪ್ರತಿಕೂಲವಾಗಿದ್ದಲ್ಲಿ, ನಮ್ಮ ಮಗುವನ್ನು ಗುರುಕುಲದಿಂದ ಬಿಡಿಸಿ ಕಳುಹಿಸಿಕೊಡುವ ಪೂರ್ಣ ಸ್ವಾತಂತ್ರ್ಯತಮಗಿದೆ ಎಂದು ಒಪ್ಪಿಕೊಂಡಿರುತ್ತೇವೆ.

**ಗುರುಕುಲವು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಹೊಂದಿದ್ದು, ಇದಕ್ಕೆ ಸಂಬಂಧಿಸಿದ ಶೈಕ್ಷಿಕ ವ್ಯವಸ್ಥೆ ಇರುತ್ತದೆ. ಇದಕ್ಕೆ ಪೂರಕವಾಗಿ ರಾಜ್ಯ ಸರ್ಕಾರದ 6 ರಿಂದ 10 ನೆಯ ತರಗತಿಯವರೆಗಿನ ಕನ್ನಡ ಮಾಧ್ಯಮದ ಪಠ್ಯ ಪುಸ್ತಕಾಧಾರಿತ ಬೋಧನೆಯು , ಕಲಿಕೆಗೆ ಮಾತ್ರ ಸೀಮಿತವಾಗಿರುತ್ತದೆ. ಹಾಗೂ ಅಂತಿಮವಾಗಿ SSLC ಪರೀಕ್ಷೆಯನ್ನು ಬಾಹ್ಯವಾಗಿ ನೀಡಬೇಕಿರುತ್ತದೆ ಎಂಬ ವಿಷಯವನ್ನು ಸ್ಪಷ್ಟವಾಗಿ ತಿಳಿದಿರುತ್ತೇವೆ.**

ನಮ್ಮ ಮಗುವನ್ನು ಗುರುಕುಲದಿಂದ ಕರೆದುಕೊಂಡು ಹೋದ ನಂತರ, ಮಗುವಿನ ಮುಂದಿನ ಶಿಕ್ಷಣದ ಕಲಿಕೆಯ ಬಗ್ಗೆ ಬೇಕಾಗುವ ಎಲ್ಲಾ ತರಹದ ಸಿದ್ಧತೆಗಳನ್ನು ಹಾಗೂ ಅವುಗಳೆಲ್ಲದರ ಪೂರ್ಣ ಜವಾಬ್ದಾರಿಯನ್ನು ಪಾಲಕರಾದ ನಾವು ವಹಿಸುತ್ತೇವೆ. ಇವುಗಳ ಬಗ್ಗೆ ನಿಮ್ಮ ಸಂಸ್ಥೆಯ ಮೇಲೆ ಯಾವುದೇ ರೀತಿಯ ಹೊರೆ ಅಥವಾ ಹೊಣೆ ಹಾಕುವುದಿಲ್ಲ.

ಸಂಸ್ಥೆಯ ಎಲ್ಲಾ ಸೌಲಭ್ಯಗಳನ್ನು ತಾವು ಉಚಿತವಾಗಿ ನೀಡುತ್ತಿದ್ದು ಹಾಗೂ ಅದರ ಸೇವಾ ಚಟುವಟಿಕೆ ಪರೋಪಕಾರವಾಗಿರುವುದರಿಂದ, ಗುರುಕುಲದ ಒಳ ಆವರಣದಲ್ಲಾಗಲಿ ಅಥವಾ ಹೊರಗೆ ಹೋದ ಸಂದರ್ಭದಲ್ಲಾಗಲಿ, ದುರಾದೃಷ್ಟವಶಾತ್ ಯಾವುದೇ ತರಹದ ಹಾನಿ ನಮ್ಮ ಮಗುವಿಗೆ ಸಂಭವಿಸಿದ್ದಲ್ಲಿ ಅದಕ್ಕೆ ಗುರುಕುಲದ ಆಡಳಿತವರ್ಗ / ಶಿಕ್ಷಕ ವೃಂದದವರನ್ನಾಗಲಿ, ಸಂಸ್ಥೆಯ ಮೇಲೆ ಅಥವಾ ಸಂಸ್ಥೆಯ ಸದಸ್ಯರನ್ನಾಗಲಿ, ಕಾನೂನಿನ ದೃಷ್ಟಿಯಿಂದ ಕ್ರಮಕ್ಕೆ ಒಳಪಡಿಸದೇ ಪಾಲಕರಾದ ನಾವೇ ಹೊಣೆಗಾರಿಕೆ ವಹಿಸಿಕೊಳ್ಳುವೆವು. ಈ ಒಪ್ಪಿಗೆಯೊಂದಿಗೆ ನಮ್ಮ ಭರವಸೆಯನ್ನು ಈ ಸಮ್ಮತಿ ಪತ್ರದ ಮೂಲಕ ನೀಡುತ್ತಿರುವೆವು.

ಒಂದು ವೇಳೆ ಮಗುವು ಕಾರಣಾಂತರದಿಂದ ಯಾರಿಗೂ ತಿಳಿಸದೇ ಗುಪ್ತವಾಗಿ ಗುರುಕುಲ ಬಿಟ್ಟು ಹೋದಲ್ಲಿ, ಸಂಸ್ಥೆಯು ಮಗುವಿನ ಪೋಷಕರಿಗೆ ವಿಷಯ ತಿಳಿಸುವುದರೊಂದಿಗೆ ಪೋಲಿಸ್ ಠಾಣೆಗೆ ದೂರನ್ನು / ವಿಷಯವನ್ನು ತಿಳಿಸುವುದರ ಬಗ್ಗೆ ನಮ್ಮ ಒಪ್ಪಿಗೆ ಇರುತ್ತದೆ. ತದನಂತರ ಮುಂದಿನ ಕ್ರಮ, ಹೊಣೆಗಾರಿಕೆ ನಾವೇ ವಹಿಸುವೆವು.

ಗುರುಕುಲದ ನಿಯಮದಂತೆ ಸಂದರ್ಶನದಲ್ಲಿ ಮಗು ಆಯ್ಕೆ ಆದಲ್ಲಿ ನಿಶ್ಚಿತ ದಿನದಂದು ಮಗುವನ್ನು ನಾವು ಗುರುಕುಲದಲ್ಲಿ ಸೇರ್ಪಡೆಗೊಳಿಸುತ್ತೇವೆ. ನಂತರ ಮಗು ಗುರುಕುಲದ ದಿನಚರಿಯಲ್ಲಿ ಹಾಗೂ ಗುರುಕುಲದ ಪರಿಸರಕ್ಕೆ (2 ತಿಂಗಳ ಕಾಲಮಿತಿಯಲ್ಲಿ) ಎಷ್ಟರ ಮಟ್ಟಿಗೆ ಹೊಂದಿಕೊಳ್ಳುತ್ತದೆ ಎಂದು ತಮ್ಮ ತೀರ್ಮಾನಕ್ಕೆ ಬದ್ಧರಾಗಿರುತ್ತೇವೆ. ಒಂದು ವೇಳೆ ತಮ್ಮ ಅಂತಿಮ ನಿರ್ಧಾರದಲ್ಲಿ ನಮ್ಮ ಮಗು ಗುರುಕುಲಕ್ಕೆ ಸೂಕ್ತವಾಗದಿದ್ದಲ್ಲಿ ತಮ್ಮ ಸೂಚನೆಯಂತೆ ನಾವು ಗುರುಕುಲಕ್ಕೆ ಆಗಮಿಸಿ ನಮ್ಮ ಮಗುವನ್ನು ಕರೆದುಕೊಂಡುಹೋಗುವೆವು ಎಂದು ತಮಗೆ ಆಶ್ವಾಸನೆ ನೀಡುವೆವು.

ನಾವು ಮೇಲ್ಕಂಡ ಎಲ್ಲಾ ವಿಷಯಗಳನ್ನು ಒಪ್ಪಿ ಸಹಿ ಹಾಕಿರುತ್ತೇವೆ ಹಾಗೂ ಬದ್ಧರಾಗಿರುತ್ತೇವೆ. ನಾವು ಈ ಮೇಲೆ ನೀಡಿರುವ ಯಾವುದೇ ವಿಷಯ ಅಸತ್ಯವಲ್ಲ ಹಾಗೂ ಮುಚ್ಚಿಟ್ಟಿರುವುದಿಲ್ಲ.

ಈ ಎಲ್ಲಾ ಮೇಲ್ಕಂಡ ವಿಚಾರಗಳೊಂದಿಗೆ ನಾವು ನಮ್ಮ ಕುಟುಂಬದಲ್ಲಿ ಚರ್ಚಿಸಿ, ಚಿಂತಿಸಿ ನಮ್ಮ ಮಗು ಗುರುಕುಲದಲ್ಲಿ ವ್ಯಾಸಂಗ ಮಾಡಬೇಕೆಂದು ಸೇರಿಸಲು ಇಚ್ಛಿಸಿದ್ದು ನಾವು ತಮಗೆ ಪೂರ್ಣ ಸಹಕಾರ ನೀಡುವುದಾಗಿ ಒಪ್ಪಿಕೊಂಡು ಈ ಕೆಳಗೆ ನಮ್ಮ ಸಮ್ಮತಿಯನ್ನು ರುಜುವಾತಿನೊಂದಿಗೆ ದೃಢೀಕರಿಸುತ್ತಿರುವೆವು.
ಮಗುವಿನ ಸಂದರ್ಶನದ ನಂತರ ಆಯ್ಕೆಯ ಪ್ರಕ್ರಿಯೆಯಲ್ಲಿ, ಗುರುಕುಲದ ಆಡಳಿತ ಮಂಡಳಿಯ ಹಾಗೂ ಸಂದರ್ಶಕರ ತೀರ್ಮಾನವೇ ಅಂತಿಮವಾಗಿರುತ್ತದೆ ಎಂಬ ವಿಚಾರಕ್ಕೆ ನಾವು ಬದ್ಧರಾಗಿರುತ್ತೇವೆ.

**ವಿ. ಸೂ :- ಸಂದರ್ಶನಕ್ಕೆ ನಿಗದಿಪಡಿಸಿದ ದಿನದಂದು, ತಂದೆ ತಾಯಿ ಮತ್ತು ಮಗು ಕಡ್ಡಾಯವಾಗಿ ಗುರುಕುಲದಲ್ಲಿ ಹಾಜರಿರಬೇಕಿರುತ್ತದೆ.**
**(ಭರ್ತಿ ಮಾಡಿದ ಅರ್ಜಿಯನ್ನು ಸ್ಪೀಡ್ ಪೋಸ್ಟ್ ಮುಖಾಂತರ ಅರ್ಜಿಯ ಆರಂಭದಲ್ಲಿರುವ ಗುರುಕುಲದ ವಿಳಾಸಕ್ಕೆ ಕಳುಹಿಸುವುದು ಅಥವಾ ಖುದ್ದು ತಾವೇ ಬಂದು ನೀಡಬಹುದು )**

**ಗುರುಕುಲದ ಮಾರ್ಗ ಸೂಚಿ !**

**ಪೋಷಕರ ಸಹಿ**
Signature of the Parent

ಸ್ಥಳ:

ತಂದೆ.................................................... ತಾಯಿ ....................................................

**ಪೋಷಕರ ಹೆಬ್ಬೆಟ್ಟು ಗುರುತು**
LTM of the Parent

ದಿನಾಂಕ: